# ಕ್ರಾಂತಿಯ ಕಿಡಿ

**ದರ್ಶನ್ ಅವರನ್ನು ಮಾಧ್ಯಮಗಳು ನಿಷೇಧ ಮಾಡಿರುವುದು ಇತ್ತೀಚೆಗೆ ಹೆಚ್ಚು ಹೆಚ್ಚು ಚರ್ಚೆಯಾಗುತ್ತಿದೆ. ಆವರ 'ಕ್ರಾಂತಿ' ಸಿನಿಮಾ ಬಿಡುಗಡೆಗೆ ಸಜ್ಜಾಗಿರುವುದೂ ಈ ಚರ್ಚೆ ಮುನ್ನೆಲೆಗೆ ಬರಲು ಮುಖ್ಯ ಕಾರಣ. ಮಾಧ್ಯಮಗಳು ಮತ್ತು ದರ್ಶನ್ ಅಭಿಮಾನಿಗಳ ಬಲದ ನಡುವೆ ಹುಟ್ಟಿಕೊಂಡಿರುವ ಶೀತಲಸಮರದ ಪರಿಣಾಮಗಳು ಏನಾಗಬಹುದು?**

**■ ಪದ್ಮನಾಭ ಭಟ್**

ನಟ ದರ್ಶನ್‌ಗೆ ವಿವಾದಗಳು ಹೊಸತೇನೂ ಅಲ್ಲ. ದರ್ಶನ್ ವಿವಾದಗಳನ್ನು ಸುದ್ದಿ ಮಾಡುವುದು ಮಾಧ್ಯಮಗಳಿಗೂ ಹೊಸ ವಿಷಯವೇನಲ್ಲ. ಆಗಾಗ ಛಾಲೆಂಜಿಂಗ್ ಸ್ಟಾರ್ ಏನಾದರೂ ವಿವಾದಕ್ಕೆ ಸಿಲುಕಿಕೊಳ್ಳುವುದು, ಮಾಧ್ಯಮಗಳು ಅವರ ಹಿಂದೆ ಮುಂದೆ ಸುತ್ತಿ 'ಬೈಟ್' ಪಡೆಯಲು ಯತ್ನಿಸುವುದು, ಅದಕ್ಕೆ ದರ್ಶನ್ ತಮ್ಮ ಸಿನಿಮಾ ಮಾಸ್ ಡೈಲಾಗ್ ಶೈಲಿಯಲ್ಲಿಯೇ ಮಾಧ್ಯಮ ಪ್ರತಿನಿಧಿಗಳಿಗೆ ಹಿಗ್ಗಾಮುಗ್ಗಾ ಮಾತಾಡುವುದು ಇವೆಲ್ಲವೂ ನಡೆಯುತ್ತಲೇ ಇದ್ದವು. ಆದರೆ ಕಳೆದ ಒಂದೂವರೆ ವರ್ಷದಲ್ಲಿ ಮುಖ್ಯವಾಹಿನಿಯ ಹಲವು ಮಾಧ್ಯಮಗಳಲ್ಲಿ 'ಡಿ ಬಾಸ್' ಸುದ್ದಿಯಿಲ್ಲ. ಜೊತೆಗೆ 'ದರ್ಶನ್ ಅವರನ್ನು ಮೀಡಿಯಾ ಬ್ಯಾನ್ ಮಾಡಿದೆ' ಎಂಬ ಮಾತು ಹಲವು ರೀತಿಗಳಲ್ಲಿ ಬೆಳೆದು ಈಗೊಂದು ನಿರ್ಣಾಯಕ ಹಂತಕ್ಕೆ ಬಂದು ನಿಂತಿದೆ. ಅದರ ಬಗ್ಗೆ ಚರ್ಚಿಸುವುದಕ್ಕೂ ಮುನ್ನ ಇನ್ನೊಂದು ಘಟನೆಯನ್ನು ನೆನಪಿಸಿಕೊಳ್ಳಬೇಕು.

ಅದು 'ಚಕ್ರವರ್ತಿ' ಸಿನಿಮಾ ಬಿಡುಗಡೆಯ ಸಂದರ್ಭ. ಆಗಲೂ ದರ್ಶನ್ ಹಲವು ವಿವಾದಗಳನ್ನು ಹುಟ್ಟುಹಾಕುತ್ತ, ಅವು ಮಾಧ್ಯಮಗಳಲ್ಲಿ ಇನ್ನಷ್ಟು ರೆಕ್ಕೆಪುಕ್ಕಗಳೊಂದಿಗೆ ಪ್ರಸಾರವಾಗುತ್ತ ಮತ್ತೆ ತಣ್ಣಗಾಗುತ್ತ ಇರುವುದು ನಡೆದೇ ಇತ್ತು. 'ಚಕ್ರವರ್ತಿ' ಸಿನಿಮಾ ಪ್ರಚಾರಕ್ಕಾಗಿ ಬೆಂಗಳೂರಿನ ಸ್ಟಾರ್ ಹೋಟೆಲೊಂದರಲ್ಲಿ ಮಾಧ್ಯಮಪ್ರತಿನಿಧಿಗಳೊಂದಿಗೆ ಸಂದರ್ಶನವನ್ನು ಏರ್ಪಡಿಸಲಾಗಿತ್ತು. ಅಲ್ಲಿಯೂ ದರ್ಶನ್, ಮಾಧ್ಯಮದವರ ಪ್ರಶ್ನೆಗಳಿಗೆ ಅಸಡ್ಡಾಳ ಉತ್ತರಗಳನ್ನು ಕೊಡುತ್ತ, ಅಹಂಕಾರದಿಂದ ಪ್ರತಿಕ್ರಿಯಿಸುತ್ತಲೇ ಇದ್ದರು. ಒಬ್ಬ ಪತ್ರಕರ್ತರಿಗಂತೂ 'ಗ್ರೋ ಅಪ್ ಮ್ಯಾನ್' ಎಂದು ಹೆಗಲನ್ನೂ ತಟ್ಟಿದ್ದರು. ಮಾತುಕತೆಯೆಲ್ಲ ಮುಗಿದ ಮೇಲೆ ಹಲವು ವರ್ಷಗಳಿಂದ ಸಿನಿಮಾ ಪತ್ರಕರ್ತರಾಗಿರುವವರೊಬ್ಬರು ದರ್ಶನ್‌ಗೆ ಕಾಳಜಿಯ ಧ್ವನಿಯಲ್ಲಿಯೇ, 'ನಿಮ್ಮ ಬಗ್ಗೆ ಆಗಾಗ ಏನೋ ವಿವಾದಗಳಾಗುತ್ತಿರುತ್ತವೆ. ಅದನ್ನು ವರದಿ ಮಾಡದೇ ಇರುವುದು ಪತ್ರಕರ್ತರಾಗಿ ನಮ್ಮ ವೃತ್ತಿಧರ್ಮಕ್ಕೆ ವಿರುದ್ಧವಾಗಿದ್ದು. ಆದರೆ ಅದರಲ್ಲಿ ಸತ್ಯಾಸತ್ಯತೆ ಎಷ್ಟು ಎಂದು ತಿಳಿದು ವರದಿ ಮಾಡುವುದೂ ಅಷ್ಟೇ ಮುಖ್ಯ. ಅಂಥ ಸನ್ನಿವೇಶಗಳಲ್ಲಿ ನಿಮ್ಮನ್ನೇ ನೇರವಾಗಿ ಕೇಳಲು, ಸ್ಪಷ್ಟನೆ ಪಡೆಯಲು ಸಾಧ್ಯವಾದರೆ ಎಷ್ಟೋ ವಿವಾದಗಳೂ ಹುಟ್ಟಿಕೊಳ್ಳುವುದೇ ಇಲ್ಲ. ಆಗ ನಿಮ್ಮನ್ನು ಸಂಪರ್ಕಿಸುವುದು ಹೇಗೆ?' ಎಂದು ಕೇಳಿದ್ದರು. ಅದಕ್ಕೆ ದರ್ಶನ್, ವಿಕಟನಗೆ ನಕ್ಕು ತಮ್ಮ ಭುಜದಿಂದ ಒಂದು ಕೂದಲನ್ನು ಕಿತ್ತಂತೆ ನಟಿಸಿ, 'ನನ್ನನ್ನು ಯಾರೂ ಸಂಪರ್ಕಿಸುವುದು ಬೇಕಾಗಿಲ್ಲ. ನೀವು ಮಾಡುವ ವರದಿಗಳೆಲ್ಲ ಇದಕ್ಕೆ ಸಮ' ಎಂದು ಹೇಳಿಹೋಗಿದ್ದರು.

ದರ್ಶನ್ ಈ ವರ್ತನೆ ಪತ್ರಕರ್ತರಿಗೆ ಹೊಸದೇನೂ ಅಲ್ಲ. ಇನ್ನೊಂದು ಸಂದರ್ಶನದಲ್ಲಿಯೂ ಅವರು 'ನೆಗೆಟಿವ್ ಅಥವಾ ಪಾಸಿಟಿವ್ ಎರಡೂ ರೀತಿ ಪ್ರಚಾರವೂ ನಂಗೆ ಬೇಕು' ಎಂಬರ್ಥದ ಮಾತಾಡಿದ್ದರು. ಮಾಧ್ಯಮದವರ ಮೇಲೆ ಅವರಿಗೆ ಸಿಕ್ಕಾಪಟ್ಟೆ ಸಿಟ್ಟಿದೆ. ಅದನ್ನು ಅಷ್ಟೇ ಒರಟಾಗಿ ಅವರು ವ್ಯಕ್ತಪಡಿಸುತ್ತಲೂ ಇರುತ್ತಾರೆ. ಹೀಗೆ ಮಾಧ್ಯಮದವರನ್ನು ಎಷ್ಟೇ ಬೈದರೂ ಅವರು ಮತ್ತೆ ಮತ್ತೆ ಮೈಕ್ ಹಿಡಿದು, ಅವರ ಕಾರಿನ ಹಿಂದೆ, ಮನೆ ಗೇಟಿನ ಮುಂದೆ, ಫಾರ್ಮ್ ಹೌಸಿನ

